# ಜ್ವಾಲಾ ಎಂಬ ಜ್ವಾಲೆ

**ಜ್ವಾಲಾ ಡಬಲ್ಸ್ ಮಾತ್ರ ಆಡುವುದೆಂದು ಅಧಿಕಾರಿಗಳಿಗೆ ಮೊದಲೇ ಗೊತ್ತಿತ್ತಲ್ಲ? ಹಾಗಿದ್ದರೆ 30 ಲಕ್ಷ ರೂಪಾಯಿ ಎಂದು ನಿಗದಿ ಮಾಡಿದ್ದು ಯಾರು? ಏಕೆ? ವಿವೇಚನೆ ಇಲ್ಲದೆ ಅದನ್ನು ಮಾಡಲಾಗಿತ್ತೆ?**

■ ಬಿ.ಎಂ.ಹನೀಫ್

ಹೆಣ್ಣುಮಕ್ಕಳು ಗಟ್ಟಿಗಂಟಲಿನಲ್ಲಿ ಮಾತನಾಡುವಂತಿಲ್ಲ! ಅದು ನಮ್ಮ ಅಲಿಖಿತ ನಿಯಮ. ಆದರೆ ಜ್ವಾಲಾ ಗುಟ್ಟಾ ಪದೇ ಪದೇ ಕೂಗಾಡುತ್ತಾಳೆ. ಹಾಗೆ ಕೂಗುವಂತೆ ನಮ್ಮ ವ್ಯವಸ್ಥೆ ಪ್ರಚೋದಿಸುತ್ತದೆ. ಮೊನ್ನೆ ನಡೆದದ್ದನ್ನೇ ನೋಡಿ: ಇದೇ ಮೊದಲ ಬಾರಿಗೆ ಇಂಡಿಯನ್ ಬ್ಯಾಡ್ಮಿಂಟನ್ ಲೀಗ್ (ಐಬಿಎಲ್) ಆರಂಭಗೊಂಡು, ಆಟಗಾರರ ಹರಾಜು ನಡೆಯಿತು. ಹರಾಜಿಗೆ ಮುನ್ನ ಜ್ವಾಲಾ ಗುಟ್ಟಾಗೆ (ಮತ್ತು ಆಕೆಯ ಜತೆಗಾತಿ ಅಶ್ವಿನಿ ಪೊನ್ನಪ್ಪಗೆ) ನಿಗದಿಯಾಗಿದ್ದ ಮೂಲ ಬೆಲೆ 30 ಲಕ್ಷ ರೂಪಾಯಿ.

ಆದರೆ ಇಬ್ಬರಿಗೂ ಆ ಮೊತ್ತಕ್ಕೆ ಹರಾಜು ಕೂಗಲು ಯಾರೂ ಸಿದ್ಧರಿರಲಿಲ್ಲ! ಏಕೆಂದರೆ ಅವರು ಸಿಂಗಲ್ಸ್ ಆಡುತ್ತಿಲ್ಲ; ಡಬಲ್ಸ್ ಆಡೋದು– ಇದು ಐಬಿಎಲ್‌ನ ಸಂಘಟಕರ ವಾದ. ಅದಕ್ಕಾಗಿ ಅವರು ಮೂಲ ಬೆಲೆಯನ್ನು ಬದಲಾವಣೆ ಮಾಡಿದರು. ಕೊನೆಗೆ 18.6 ಲಕ್ಷ ರೂಪಾಯಿಗೆ ದೆಹಲಿ ಸ್ಮಾಷರ್ಸ್ ತಂಡ ಜ್ವಾಲಾ ಗುಟ್ಟಾರನ್ನು ಖರೀದಿಸಿತು.

ಜ್ವಾಲಾ ಡಬಲ್ಸ್ ಮಾತ್ರ ಆಡುವುದೆಂದು ಅಧಿಕಾರಿಗಳಿಗೆ ಮೊದಲೇ ಗೊತ್ತಿತ್ತಲ್ಲ? ಹಾಗಿದ್ದರೆ 30 ಲಕ್ಷ ರೂಪಾಯಿ ಎಂದು ನಿಗದಿ ಮಾಡಿದ್ದು ಯಾರು? ಏಕೆ? ವಿವೇಚನೆ ಇಲ್ಲದೆ ಅದನ್ನು ಮಾಡಲಾಗಿತ್ತೆ? ಹರಾಜು ಕೂಗುವ ಮುನ್ನವೇ ಮೂಲ ಬೆಲೆಯನ್ನು ಇಳಿಸಲು ಕಾರಣಗಳೇನು?– ಇದು ಜ್ವಾಲಾ ಕೇಳಿದ ಪ್ರಶ್ನೆಗಳು. ಆಕೆ ಹಾಗೆ ಕೇಳಿದ್ದೇ ಅಪರಾಧವಾಗಿದೆ. 'ಆಕೆ ಯಾವತ್ತೂ ಜಗಳಗಂಟಿಯೇ' ಎನ್ನುವ ಆರೋಪ ಬಂದಿದೆ!

'ಈ ಬಗ್ಗೆ ಇನ್ನು ಹೆಚ್ಚು ಮಾತನಾಡುವುದಿಲ್ಲ. ಬ್ಯಾಡ್ಮಿಂಟನ್ ಕೋರ್ಟ್‌ನಲ್ಲಿ ರ್‍ಯಾಕೆಟ್ ಮೂಲಕ ಉತ್ತರ ನೀಡುತ್ತೇನೆ' ಎಂದಿದ್ದಾಳೆ ಜ್ವಾಲಾ. ಬೇರೆ ದಾರಿಯಿಲ್ಲ!

5 ಅಡಿ 10 ಇಂಚು ಎತ್ತರದ, ಈ ಅತಿಶಯ ಸುಂದರಿ ಎಡಗೈ ಆಟಗಾರ್ತಿ. 2002ರಿಂದಲೂ ಬ್ಯಾಡ್ಮಿಂಟನ್ ಡಬಲ್ಸ್ ಕೋರ್ಟ್‌ನಲ್ಲಿ ಅನೇಕ ಸಲ ತನ್ನ ಸಾಮರ್ಥ್ಯವನ್ನು ಸಾಬೀತು ಪಡಿಸಿದ್ದಾಳೆ. 2004ರಲ್ಲಿ ತೊಲೋಸ್ ಓಪನ್ ಟೂರ್ನಿ, ಸ್ಕಾಟಿಶ್ ಮತ್ತು ಪೋರ್ಚುಗೀಸ್ ಅಂತರರಾಷ್ಟ್ರೀಯ ಟೂರ್ನಿಗಳಲ್ಲಿ ರನ್ನರ್ಸ್ ಅಪ್ ಗೆದ್ದದ್ದು; 2006ರಲ್ಲಿ ಶ್ರೀಲಂಕಾ ಓಪನ್ ಟೂರ್ನಿಯಲ್ಲಿ ಮತ್ತು 2007ರಲ್ಲಿ ಸೈಪ್ರಸ್ ಟೂರ್ನಿಯಲ್ಲಿ ಡಬಲ್ಸ್ ಪ್ರಶಸ್ತಿ ಗೆದ್ದದ್ದು; 2008ರಲ್ಲಿ ನೇಪಾಳ, ಪಾಕಿಸ್ತಾನ ಮತ್ತು ಭಾರತದಲ್ಲಿ ನಡೆದ ಮೂರೂ ಅಂತರರಾಷ್ಟ್ರೀಯ ಟೂರ್ನಿಗಳಲ್ಲಿ ಪ್ರಶಸ್ತಿ ಗೆದ್ದದ್ದು– ಹೀಗೆ ಆರಂಭದ ಸಾಧನೆಗಳದ್ದು ಒಂದು ಹಂತ. 2010ರಲ್ಲಿ ದೆಹಲಿ ಕಾಮನ್‌ವೆಲ್ತ್‌ನಲ್ಲಿ ಮಿಕ್ಸೆಡ್ ಡಬಲ್ಸ್‌ನಲ್ಲಿ ಬೆಳ್ಳಿ ಪದಕ, ಡಬಲ್ಸ್‌ನಲ್ಲಿ (ಅಶ್ವಿನಿ ಪೊನ್ನಪ್ಪ ಜತೆಗೆ) ಚಿನ್ನದ ಪದಕ, ಕೊನೆಗೆ 2011ರ ಲಂಡನ್ ವಿಶ್ವ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕಂಚಿನ ಪದಕ– ಇನ್ನೊಂದು ಹಂತ. ಒಂದೊಮ್ಮೆ ಜಾಗತಿಕ ಡಬಲ್ಸ್ ರ್‍ಯಾಂಕಿಂಗ್‌ನಲ್ಲಿ 6ನೇ ಸ್ಥಾನಕ್ಕೇರಿದ್ದ ಜ್ವಾಲಾ, ಸದ್ಯಕ್ಕೆ 21ನೇ ರ್‍ಯಾಂಕ್‌ನಲ್ಲಿದ್ದಾಳೆ.

ಹಾಗೆ ನೋಡಿದರೆ ಜ್ವಾಲಾಳದ್ದು ಗಟ್ಟಿ ಹಾಗೂ ಬಹುಮುಖಿ ವ್ಯಕ್ತಿತ್ವ. ರಾಷ್ಟ್ರೀಯ ಬ್ಯಾಡ್ಮಿಂಟನ್ ಚಾಂಪಿಯನ್ ಚೇತನ್ ಆನಂದ್ ಜತೆಗಿನ ವಿವಾಹ 6 ವರ್ಷಗಳ ಅವಧಿಗಷ್ಟೇ ಬಾಳಿಕೆ ಬಂತು. ಈಕೆಯ ಡೈವೋರ್ಸ್‌ಗೆ ಕ್ರಿಕೆಟಿಗ ಅಜರುದ್ದೀನ್ ಜತೆಗಿನ ಸ್ನೇಹ ಕಾರಣ ಎಂಬ ಗುಲ್ಲೂ ಹಬ್ಬಿತ್ತು. ಈಕೆ ಯಾವುದಕ್ಕೂ 'ಕ್ಯಾರೆ' ಅನ್ನಲಿಲ್ಲ. ಈ ಮಧ್ಯೆ ತೆಲುಗು ಸಿನಿಮಾ 'ಗುಂಡೆ ಜಾರಿ ಘಲ್ಲಂತಾಯಿಂದೆ'ಯಲ್ಲಿ ಹೀರೋಯಿನ್ ಕೂಡಾ ಆಗಿದ್ದಾಳೆ. ಈಗ ಸಂಭಾವನೆಯ ವಿವಾದ.

ಜ್ವಾಲಾಳ ತಂದೆ ಕ್ರಾಂತಿ ಗುಪ್ತಾ ಮೂಲತಃ ವಾರ್ಧಾದಿಂದ ಹೈದರಾಬಾದ್‌ಗೆ ವಲಸೆ ಬಂದವರು. ಸ್ವಾತಂತ್ರ್ಯ ಹೋರಾಟಗಾರ ಎಡಪಂಥೀಯರ ಕುಟುಂಬದವರು. ತಾಯಿ ಯೆಲನ್ ಗುಟ್ಟಾ ಚೀನಾದಿಂದ ಗಾಂಧೀವಾದಿ ಅಜ್ಜನ ಜತೆಗೆ ಗಾಂಧೀಜಿಯವರ ಸೇವಾಶ್ರಮಕ್ಕೆ ವಲಸೆ ಬಂದವರು. ಯೆಲನ್ ಗಾಂಧೀಜಿಯವರ ಆತ್ಮಕಥೆಯನ್ನು ಚೀನೀ ಭಾಷೆಗೆ ಅನುವಾದ ಕೂಡಾ ಮಾಡಿದ್ದಾರೆ. ಬಂಡಾಯದ ಗುಣ ಜ್ವಾಲಾಳ ರಕ್ತದಲ್ಲೇ ಬಂದಂತಿದೆ. ಐಬಿಎಲ್ ಪಂದ್ಯಗಳಲ್ಲಿ ಏನಾಗುತ್ತೋ ನೋಡಬೇಕು.

